ಕಣ್ಣುಗಳಿಗೆ ಇನ್ನೂ ಅಪಾಯ. ಜತೆಗೆ ನಮ್ಮ ಮುಖಕ್ಕೆ ಹೊಂದದ ಸನ್‌ಗ್ಲಾಸ್ ಧರಿಸಿದರೆ ಧರಿಸಿದ ಉದ್ದೇಶವೂ ಈಡೇರದು ಎನ್ನುತ್ತಾರೆ ಸೌಂದರ್ಯ ತಜ್ಞೆ, ರೂಪದರ್ಶಿ ಬೆಂಗಳೂರಿನ ರಾಜೇಶ್ವರಿ ಎಂ.ಕೆ.

ಸಾಮಾನ್ಯವಾಗಿ ನಾವು ತೊಡುವ ಉಡುಗೆಗಳೊಂದಿಗೆ ಇತರೆಲ್ಲವನ್ನೂ ಮ್ಯಾಚ್ ಮಾಡಿಕೊಳ್ಳುವ ಖಯಾಲಿ ಬಹುತೇಕರದ್ದು. ಮ್ಯಾಚಿಂಗ್ ಇಯರ್ ರಿಂಗ್, ಸ್ಲಿಪರ್, ಬಳೆ, ಬೊಟ್ಟು ಹೀಗೆ... ಅದರಂತೆ ಸನ್‌ಗ್ಲಾಸ್ ಮ್ಯಾಚ್ ಮಾಡಿಕೊಳ್ಳಲಾಗದು. ಸನ್‌ಗ್ಲಾಸ್ ಏನಿದ್ದರೂ ನಮ್ಮ ಮುಖಕ್ಕೆ ತಕ್ಕಂತೆ ಮ್ಯಾಚ್ ಮಾಡಿಕೊಳ್ಳಬೇಕು. ಮುಖಕ್ಕೆ ಹಾಗೂ ಕಣ್ಣುಗಳಿಗೆ ಯಾವ ಬಗೆಯ ಸನ್‌ಗ್ಲಾಸ್ ಹೊಂದಿಕೆಯಾಗುತ್ತದೋ ಅದೇ ನಮ್ಮ ಆಯ್ಕೆಯಾಗಿರಬೇಕು. ಇಷ್ಟದ ನಟ ಅಥವಾ ನಟಿ ಧರಿಸಿದ್ದ ಸನ್‌ಗ್ಲಾಸ್ ಚೆನ್ನಾಗಿ ಕಾಣುತ್ತದೆ ಎಂದು ನಾವೂ ಅದೇ ಬಗೆಯದ್ದು ಕೊಂಡರೆ ಅದು ನಮ್ಮ ಮುಖಕ್ಕೆ ಸರಿ ಹೋಗದಿರಬಹುದು. ಆಗ ನಮ್ಮ ಮುಖ ವಿಕಾರವಾಗಿ ಕಾಣುವ ಸಾಧ್ಯತೆಯೇ ಹೆಚ್ಚು.

ಸನ್‌ಗ್ಲಾಸ್‌ಗಳನ್ನು ನಾವು ಹೆಚ್ಚು ಹೊತ್ತು ಬಳಸದಿದ್ದರೂ, ಬಿಸಿಲಿನ ಸಮಯದಲ್ಲಿ, ದೂಳಿನಲ್ಲಿ ಓಡಾಡುವಾಗ ಮಾತ್ರ ಬಳಸುತ್ತೇವೆ ಎಂದರೂ ನಿತ್ಯವೂ ಬಳಕೆ ಮಾಡುವುದರಿಂದ ಅತ್ಯುತ್ತಮ ಗುಣಮಟ್ಟದ ಸನ್‌ಗ್ಲಾಸ್ ಅನ್ನೇ ಆಯ್ದುಕೊಳ್ಳಬೇಕು. ಕೆಲವೊಮ್ಮೆ ವೈದ್ಯರ ಸಲಹೆಯನ್ನು ಪಡೆಯಬೇಕಾಗಬಹುದು.

ಸಾಮಾನ್ಯವಾಗಿ ಓವಲ್ ಶೇಪ್‌ನ ಮುಖ ಹೊಂದಿರುವವರಿಗೆ ಎಲ್ಲ ರೀತಿಯ ಮೇಕಪ್ ಹೊಂದುವ ರೀತಿ ಎಲ್ಲ ಬಗೆಯ ಸನ್‌ಗ್ಲಾಸ್‌ಗಳೂ ಹೊಂದಿಕೆಯಾಗುತ್ತವೆ. ಇವರಿಗೆ ಏವಿಯೇಟರ್ ಸನ್‌ಗ್ಲಾಸ್‌ಗಳು ತುಂಬಾ ಚೆನ್ನಾಗಿ ಕಾಣುತ್ತವೆ. ದುಂಡು ಮುಖ ಇರುವವರಿಗೆ ಆಂಗ್ಯುಲರ್, ರೆಟ್‌ಆಂಗ್ಯುಲರ್, ಸ್ಕ್ವೇರ್ ಶೇಪ್ ಸನ್‌ಗ್ಲಾಸ್ ಚೆನ್ನಾಗಿ ಕಾಣಿಸುತ್ತವೆ. ಸ್ಕ್ವೇರ್ ಶೇಪ್ ಮುಖ ಹೊಂದಿರುವವರು ರೌಂಡ್ ಸನ್‌ಗ್ಲಾಸ್ ಬಳಸಿದರೆ ಉತ್ತಮ. ಹಾರ್ಟ್ ಶೇಪ್ ಮುಖ ಹೊಂದಿರುವವರು ಎಲಾಂಗೇಟೆಡ್ ಸನ್‌ಗ್ಲಾಸ್‌ಗಳನ್ನು ಬಳಸಿದರೆ ಕ್ಲಾಸಿಕ್ ಲುಕ್ ನೀಡುತ್ತದೆ.

ಸನ್‌ಗ್ಲಾಸ್‌ಗಳು ವಿವಿಧ ಶೇಪ್‌ಗಳಲ್ಲಿ ಲಭ್ಯ. ಆಯತಾಕಾರ, ಚೌಕಾಕಾರ, ರೌಂಡ್ ಶೇಪ್, ಕ್ಯಾಟ್ ಓವರ್‌ಸೈಜಡ್, ಕ್ಲಿಪ್ ಆನ್ ಹೀಗೆ ಹಲವು ಬಗೆಯ ಆಕಾರಗಳಲ್ಲಿ ಸನ್‌ಗ್ಲಾಸ್‌ಗಳು ನಮ್ಮ ಕಣ್ಣುಗಳನ್ನು ಅಲಂಕರಿಸುತ್ತವೆ. ಒಂದೊಂದು ಆಕಾರದ ಗ್ಲಾಸ್‌ಗಳೂ ಒಂದೊಂದು ಬಗೆಯ ಮುಖಕ್ಕೆ ಹೊಂದುತ್ತವೆ. ಹಾಗಾಗಿ ಸನ್‌ಗ್ಲಾಸ್‌ಗಳ ಆಯ್ಕೆ ಬಗ್ಗೆ ಜಾಗೃತಿ ವಹಿಸುವುದು ಅತಿ ಅಗತ್ಯ.

ಸ್ಟೈಲಿಷ್ ಆಗಿಯೂ ಕಾಣಬೇಕು, ಸೂರ್ಯನ ಹಾನಿಕಾರಕ ಕಿರಣಗಳಿಂದ ಹಾಗೂ ದೂಳಿನಿಂದ ರಕ್ಷಣೆ ನೀಡಬೇಕು. ಅಂತಹ ಸನ್‌ಗ್ಲಾಸ್ ಆಯ್ಕೆ ನಿಮ್ಮದಾಗಿರಲಿ. ಸನ್‌ಗ್ಲಾಸ್‌ಗಳ ಆಯ್ಕೆ ಹಾಗೂ ಕಾಪಿಟ್ಟುಕೊಳ್ಳುವಿಕೆಗೆ ರಾಜೇಶ್ವರಿ ಅವರು ನೀಡುವ ಕೆಲವೊಂದು ಟಿಪ್ಸ್ ಇಲ್ಲಿವೆ.

## ಸನ್‌ಗ್ಲಾಸ್ ಹುಟ್ಟಿದ್ದು...

ಸನ್‌ಗ್ಲಾಸ್ 12ನೇ ಶತಮಾನದಲ್ಲಿ ಚೀನಾದಲ್ಲಿ ಬಳಕೆಗೆ ಬಂದಿತು ಎನ್ನುತ್ತವೆ ಇತಿಹಾಸದ ಪುಟಗಳು. ಆಗ 'ಐ ತಾಯ್' (Ai Tai) ಎಂಬ ಸ್ಮೋಕಿ ಸ್ಫಟಿಕ ಶಿಲೆಯ ಚಪ್ಪಟೆ ಫಲಕಗಳಿಂದ ಸನ್‌ಗ್ಲಾಸ್‌ಗಳನ್ನು ತಯಾರಿಸಲಾಗುತ್ತಿತ್ತು. ಈ ಸ್ಫಟಿಕ ಸನ್‌ಗ್ಲಾಸ್‌ಗಳನ್ನು ಪುರಾತನ ಚೀನೀ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರು ಬಳಸುತ್ತಿದ್ದರು. ಸಾಕ್ಷಿಗಳನ್ನು ಪ್ರಶ್ನಿಸುವಾಗ ತಮ್ಮ ಮುಖದ ಅಭಿವ್ಯಕ್ತಿಯನ್ನು ಮರೆಮಾಚಲು ಈ ಗ್ಲಾಸ್‌ಗಳನ್ನು ಬಳಸುತ್ತಿದ್ದರು. ಕಾಲಾನಂತರ ಅವು ಜನಸಾಮಾನ್ಯರ ಬಳಕೆಗೂ ಬಂದವೂ. ನಂತರ ಟ್ರೆಂಡೀ ಲುಕ್‌ಗಾಗಿ ಬಹುತೇಕರು ಸನ್‌ಗ್ಲಾಸ್‌ಗಳನ್ನು ಬಳಸಲು ಆರಂಭಿಸಿದರು.


ರಾಜೇಶ್ವರಿ

ನಿಮ್ಮ ಮುಖಭಾವದ ವಿರುದ್ಧದ ಸನ್‌ಗ್ಲಾಸ್ ಕೊಳ್ಳಿ. ಉದಾಹರಣೆಗೆ ನಿಮ್ಮದು ದುಂಡನೆ ಮುಖ ಆಗಿದ್ದರೆ ರೆಟ್‌ಆಂಗ್ಯುಲರ್, ಸ್ಕ್ವೇರ್ ಶೇಪ್ ಗ್ಲಾಸ್ ಆಯ್ಕೆ ಮಾಡಿಕೊಳ್ಳಿ.

ಸನ್‌ಗ್ಲಾಸ್‌ಗಳು ಐಬ್ರೊಗಳನ್ನು ಮರೆಮಾಚುವಂತಿರಬಾರದು. ಐಬ್ರೊ ಇಲ್ಲದ ಮುಖವನ್ನು ಕಲ್ಪಿಸಿಕೊಳ್ಳಲೂ ಆಗದು. ಐಬ್ರೊಗಳು ಮುಖದ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತವೆ. ಬಹುತೇಕರು ಐಬ್ರೊ ಮುಚ್ಚುವಂತಹ ಅಗಲದ ಸನ್‌ಗ್ಲಾಸ್ ಕೊಳ್ಳುತ್ತಾರೆ. ಇವು ಅಷ್ಟಾಗಿ ಮುಖಕ್ಕೆ ಹೊಂದುವುದಿಲ್ಲ.

ಸ್ವಲ್ಪ ದುಬಾರಿಯಾದರೂ ಸರಿಯೇ, ಗುಣಮಟ್ಟದ ಸನ್‌ಗ್ಲಾಸ್ ಕೊಳ್ಳಿ. ಹೆಚ್ಚು ಹೊತ್ತು ಬಳಸುವುದಿಲ್ಲ ಎಂದು ಕಡಿಮೆ ಬೆಲೆಯ ಗ್ಲಾಸ್‌ಗಳನ್ನು ಕೊಂಡರೆ ನಮ್ಮ ಕಣ್ಣುಗಳ ಲೆನ್ಸ್ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಹೆಚ್ಚು. ಆ ಬಳಿಕ ಕಣ್ಣುಗಳ ಚಿಕಿತ್ಸೆಗೆ ದುಬಾರಿ ಬೆಲೆಯನ್ನೇ ತೆರಬೇಕಾಗುತ್ತದೆ.

ಸನ್‌ಗ್ಲಾಸ್‌ಗಳನ್ನು ಅಗತ್ಯ ಇಲ್ಲದಾಗ ಬಳಸಬಾರದು. ಕೆಲವರು ಸನ್‌ಗ್ಲಾಸ್ ಹಾಕಿಕೊಂಡು ಮನೆ ಒಳಗೆ ಓಡಾಡುತ್ತಿರುತ್ತಾರೆ. ಇದು ಬೇಡ.

ಸನ್‌ಗ್ಲಾಸ್‌ಗಳನ್ನು ತಲೆ ಕೆಳಗಾಗಿ ಇಡಬಾರದು. ಗ್ಲಾಸ್‌ಗಳು ಸ್ಕ್ರ್ಯಾಚ್ ಆಗುತ್ತವೆ. ಅದನ್ನು ಮತ್ತೆ ಬಳಸಲು ಬರುವುದಿಲ್ಲ. ಈಗೆಲ್ಲ ಆ್ಯಂಟಿ ಗ್ಲೇರ್, ಆ್ಯಂಟಿ ಸ್ಕ್ರ್ಯಾಚಸ್ ಸನ್‌ಗ್ಲಾಸ್‌ಗಳು ಸಿಗುತ್ತವೆ. ಅವುಗಳನ್ನೇ ಬಳಸುವುದು ಒಳಿತು.

ಸನ್‌ಗ್ಲಾಸ್‌ಗಳನ್ನು ಟೀ ಶರ್ಟ್, ದುಪ್ಪಟ್ಟಾದಲ್ಲಿ ಒರೆಸುವುದು ಸರಿ ಅಲ್ಲ. ಅದಕ್ಕೆಂದೇ ಇರುವ ಕ್ಲೀನಿಂಗ್ ಕ್ಲಾತ್‌ನಲ್ಲೇ ಸ್ವಚ್ಛಗೊಳಿಸಿ.

ಕೊಳ್ಳುವಾಗ ಸನ್‌ಗ್ಲಾಸ್‌ನ ತೂಕದ ಕಡೆಗೂ ಗಮನ ಇರಬೇಕು. ಬಹಳಷ್ಟು ಫ್ರೇಮ್‌ಗಳು ಹೆಚ್ಚು ತೂಕ ಇರುತ್ತವೆ. ಅವು ಕೆಲವರಿಗೆ ಹೊಂದುತ್ತವೆ. ಇನ್ನು ಕೆಲವರಿಗೆ ಹೊಂದುವುದಿಲ್ಲ. ಕಿವಿ ಹಾಗೂ ಮೂಗಿನ ಭಾಗಗಳಿಗೆ ಕಂಫರ್ಟ್ ಅನುಭವ ನೀಡುವ ಫ್ರೇಮ್ ಆಯ್ದುಕೊಳ್ಳಿ.

ಟ್ರಿಪ್‌ಗೆ ಹೋಗುವಾಗ, ಬೀಚ್‌ನಲ್ಲಿ ಆಡುವಾಗ, ಸ್ನೇಹಿತರ ಜೊತೆ ಸುತ್ತಾಡುವಾಗ ಫ್ಯಾನ್ಸಿ ಸನ್‌ಗ್ಲಾಸ್‌ಗಳನ್ನು ಬಳಸಬಹುದು. ಆದರೆ ಆಫೀಸ್ ಮೀಟಿಂಗ್‌ನಂತಹ ಸಂದರ್ಭಗಳಲ್ಲಿ ಬ್ಲೇಸರ್, ಸೀರೆ, ಸಲ್ವಾರ್‌ನಂತಹ ಡ್ರೆಸ್ ತೊಡುವಿರಾದರೆ ಕ್ಯಾಶುವಲ್ ಸನ್‌ಗ್ಲಾಸ್‌ಗಳನ್ನು ಬಳಸಿ.

ಕೆಲವೊಮ್ಮೆ ನಮ್ಮ ಉಡುಗೆಗಳಿಗೆ ತಕ್ಕನಾದ ಸನ್‌ಗ್ಲಾಸ್‌ಗಳನ್ನು ಹಾಕಬೇಕು ಎಂದೆನಿಸಿದರೆ ಸಣ್ಣ ಪಾರ್ಟಿ ಅಥವಾ ಇವೆಂಟ್‌ಗೆ ಹೋಗಬೇಕಾದ ಸಮಯದಲ್ಲಿ ತಿಳಿ ಬಣ್ಣದ ಉಡುಗೆಗೆ ಕಪ್ಪು ಅಥವಾ ಸಿಲ್ವರ್ ಬಣ್ಣದ ಸನ್‌ಗ್ಲಾಸ್ ಹಾಕಿದರೆ ಕ್ಲಾಸಿಕ್ ಲುಕ್ ನೀಡುತ್ತದೆ. ಅದೇ ರೀತಿ ಗಾಢಬಣ್ಣದ ಉಡುಗೆಗೆ ತಿಳಿ ಬಣ್ಣದ, ಬ್ರೌನ್ ಹಾಗೂ ಯೆಲ್ಲೊ ಲೈಟ್ ಟಿಂಟೆಡ್ ಇರುವ ಸನ್‌ಗ್ಲಾಸ್ ಧರಿಸಬಹುದು. ■